4	ಬೆಳಗಾಂ	34	108	10
5	ಬಳ್ಳಾರಿ	14	49	7
6	ಬೀದರ್	25	18	11
7	ಬಿಜಾಪುರ	13	44	10
8	ಚಾಮರಾಜನಗರ	0	16	10
9	ಚಿಕ್ಕಬಳ್ಳಾಪುರ	0	22	8
10	ಚಿಕ್ಕಮಗಳೂರು	0	21	2
11	ಚಿತ್ರದುರ್ಗ	0	18	12
12	ದಕ್ಷಿಣ ಕನ್ನಡ	2	37	16
13	ದಾವಣಗೆರೆ	0	19	8
14	ಧಾರವಾಡ	3	45	10
15	ಗದಗ	0	23	3
16	ಗುಲ್ಬರ್ಗಾ	50	79	6
17	ಹಾಸನ	0	12	–
18	ಹಾವೇರಿ	7	37	7
19	ಕೊಡಗು	0	9	–
20	ಕೋಲಾರ	10	44	14
21	ಕೊಪ್ಪಳ	13	33	6
22	ಮಂಡ್ಯ	0	7	3
23	ಮೈಸೂರು	14	45	9
24	ರಾಮನಗರ	2	13	–
25	ರಾಯಚೂರು	78	57	4
26	ಶಿವಮೊಗ್ಗ	5	30	5
27	ತುಮಕೂರು	12	37	6
28	ಉಡುಪಿ	1	10	7
29	ಉತ್ತರ ಕನ್ನಡ	4	47	17

ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ–ಧಾರವಾಡ ಪೂರ್ವ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯದ ಸಲಕರಣೆಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸಲಕರಣೆಗಳನ್ನು ಖರೀದಿಸಲು ಕಾಯ್ದಿರಿಸಿದ ಮೊತ್ತ ಎಷ್ಟು ಹಾಗೂ ಖರೀದಿ ಪ್ರಕ್ರಿಯೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಪ್ರಸ್ತುತ ಕಾರ್ಯಕ್ರಮಗಳಡಿ ರಾಜ್ಯದ ಆಯ್ದ 33 ಸರ್ಕಾರಿ ಪ್ರೌಢಶಾಲೆಗಳಿಗೆ ರೂ.99.00 ಲಕ್ಷಗಳ ವೆಚ್ಚದಲ್ಲಿ ವಿಜ್ಞಾನ ಉಪಕರಣಗಳನ್ನು ಒದಗಿಸಲು ಕ್ರಿಯಾ ಯೋಜನೆಯಲ್ಲಿ ಸಿದ್ಧಪಡಿಸಿ ರಾಜ್ಯದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ತಂತ್ರಜ್ಞಾನ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಸರ್ವ ಶಿಕ್ಷಾ ಅಭಿಯಾನದಡಿ 2005–06 ಮತ್ತು 2006–07ನೇ ಸಾಲಿನಲ್ಲಿ ಪ್ರತಿ ಜಿಲ್ಲೆಯಲ್ಲಿ 10 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಿಜ್ಞಾನ ಉಪಕರಣಗಳ ಖರೀದಿಗಾಗಿ 50,000.00 ರೂ.ಗಳನ್ನು ನೀಡಲಾಗಿದೆ.

ರಾಜ್ಯದ 224 ಸರ್ಕಾರಿ ಪ್ರೌಢಶಾಲೆಗಳಲ್ಲಿನ ವಿಜ್ಞಾನ ಕೇಂದ್ರಗಳಿಗೆ ರಾಜ್ಯ ಸರ್ಕಾರದ ಅನುದಾನದಲ್ಲಿ ವಿಜ್ಞಾನ ಕೇಂದ್ರಗಳ ನಿರ್ವಹಣೆ ಮತ್ತು ವಿಜ್ಞಾನ ಉಪಕರಣಗಳ ಖರೀದಿಗಾಗಿ 2008–09ನೇ ಸಾಲಿಗೆ ಪ್ರತಿ ಕೇಂದ್ರಕ್ಕೆ ತಲಾ ರೂ.7000/–ದಂತೆ ಒಟ್ಟು 15.68 ಲಕ್ಷ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ರಾಜ್ಯದ ಎಲ್ಲಾ ಪ್ರೌಢಶಾಲಾ ವಿದ್ಯಾರ್ಥಿಗಳಿಂದ ಪ್ರಯೋಗಾಲಯ ಶುಲ್ಕ 20.00 ರೂ.ಗಳನ್ನು ಪಡೆಯುತ್ತಿದೆ. ಈ ರೀತಿ ಸಂಗ್ರಹವಾದ ಮೊತ್ತದಿಂದ ಆಯಾ ಶಾಲೆಗೆ ಅಗತ್ಯವಿರುವ ವಿಜ್ಞಾನ ಉಪಕರಣಗಳನ್ನು ಹಾಗೂ ವಿಜ್ಞಾನದ ಇತರೆ ಸಲಕರಣೆಗಳನ್ನು ಶಾಲಾ ಹಂತದಲ್ಲಿಯೇ ಖರೀದಿ ಮಾಡಲಾಗುತ್ತಿದೆ.

102 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;